ಕಳುಹಿಸುತ್ತಿರಲಿಲ್ಲ. ಮಕ್ಕಳ ಹೃದಯಗಳಲ್ಲಿರುವ ಬಯಕೆಗಳ ಬಗ್ಗೆ ಅವರಿಗೆ ಸಹಾನುಭೂತಿ ಇದ್ದು, ಆ ಬಯಕೆಗಳು ನೆರವೇರುವುದು ಸಹ ಅವರ ಹೃದಯ ಪರಿಪಕ್ವತೆಗೆ ಅಗತ್ಯವೆಂದು ಅವರ ನಂಬಿಕೆ. ಆದರೂ ಬಯಕೆಗಳು ಮಕ್ಕಳ ಆತ್ಮವನ್ನು ಬಂಧಿಸುವಷ್ಟು ಬಲವಾಗಿರಬಾರದೆಂಬುದು ಅವರ ಅಭಿಪ್ರಾಯ. ಅವರು ತಮ್ಮ ಮನೆಯಲ್ಲಿ ಕಿಂಚಿತ್ತೂ ಮುಕ್ಕಾಗದ ಶಿಸ್ತನ್ನು ಬಹಳ ಶ್ರಮವಹಿಸಿ ಜಾರಿಯಲ್ಲಿಟ್ಟಿದ್ದರು. ಆ ಶಿಸ್ತು ಅವರ ಮನಸ್ಸಿಗೆ, ದೇಹಕ್ಕೂ ಸಹ ಎಷ್ಟೋ ಶಾಂತಿ, ಸುಖವನ್ನು ತರುತ್ತಿತ್ತು.

ಎಲ್ಲ ಕಿಟಕಿಗಳ ಬಾಗಿಲುಗಳು ಮುಚ್ಚಿದ್ದವು. ಹೊರಗೆ ಗಾಳಿ ಅಬ್ಬರಿಸುತ್ತಿತ್ತು. ಮಳೆಯೂ ಪ್ರಾರಂಭವಾಯಿತು. ಮಳೆ ಹನಿಗಳು ಗಾಳಿಯ ಬಲದಿಂದ ಕಿಟಕಿ ಬಾಗಿಲುಗಳ ಸಂದಿಗಳಿಂದ ತೂರಿ ಬರುತ್ತಿದ್ದವು. ಸ್ಪರ್ಶಕ್ಕೆ ಎಲ್ಲವೂ ತಣ್ಣಗಿದ್ದವು. ಯುವಕ ಕೊಂಚ ಯುವತಿಯ ಹತ್ತಿರಕ್ಕೆ ಸರಿಯತೊಡಗಿದ. ಅವಳು ಅತ್ತಿತ್ತ ನೋಡಿ ದೂರಕ್ಕೆ ಸರಿದಳು.

'ದಾರುಣವಾಗಿದೆಯಲ್ಲ ಈ ಚಂಡಮಾರುತ!' ಅಂದ ಯುವಕ. ರಾವು ಅವರ ಪಕ್ಕವಿದ್ದ ಹಿರಿಯ ಮುಖ ಮೇಲೆತ್ತಿ, ಏನೋ ಹೇಳಲು ಹೋಗಿ, ಸುಮ್ಮನಾಗಿ ಮತ್ತೆ ಓದತೊಡಗಿದ. ಯುವಕ ಸಿಗರೇಟು ಹೊತ್ತಿಸಿದ. ಯುವತಿ ಮುಖ ಸಿಂಡರಿಸಿ ದೂರ ಸರಿದಳು. ಯುವಕ ಒಂದು ಕಿರುನಗೆ ಬೀರಿ, ಸಿಗರೇಟು ಸೇದುತ್ತಲೇ ಕುಳಿತುಕೊಂಡ.

ಚೊಕ್ಕವಾಗಿ ಬಾಚಿದ್ದ ಯುವತಿಯ ತಲೆಗೂದಲ ಗಂಟಿನಿಂದ ಮುಂಗುರುಳು ಹೊರಬಂದು ಅವಳ ಹಣೆಯ ಮೇಲೆ, ಕೆನ್ನೆಗಳ ಮೇಲೆ ಹಾರಾಡುತ್ತಿತ್ತು. ತಮ್ಮ ಹೆಣ್ಣುಮಕ್ಕಳು ತಲೆ ಬಾಚುವ ರೀತಿಯನ್ನು ರಾವು ಅವರೇ ನಿರ್ಣಯಿಸುತ್ತಿದ್ದರು. ಆ ವಿಷಯ ಅವರಿಗೆ ನೆನಪಾಯಿತು. ಅವರ ಅಭ್ಯಾಸಗಳು, ಹರಕೆಗಳು, ವ್ರತಗಳು, ಗೆಳೆತನ, ಬಟ್ಟೆ ಧರಿಸುವ ಕ್ರಮ, ಎಲ್ಲವೂ ಸಹ. ಸೌಂದರ್ಯ ಕುರಿತು, ಮರ್ಯಾದೆ ಕುರಿತು ರಾವು ಅವರಿಗಿದ್ದ ಅಭಿಪ್ರಾಯಗಳಿಗೆ ಅನುಗುಣವಾಗಿ ನಿರ್ಣಯವಾಗಿಬಿಡುತ್ತಿತ್ತು...

ಎದುರಿನಲ್ಲಿ ಕುಳಿತಿದ್ದ ವೃದ್ಧ, ತನ್ನ ಸುತ್ತಿದ್ದ ಹಾಸಿಗೆಯಿಂದ ಬೂದಿ ರಂಗಿನ ಅಂಗಿ ತೆಗೆದು ಧರಿಸಿದ. ಆತ ಆ ಅಂಗಿಯಲ್ಲಿ, ಪಟ್ಟೆಗಳ ಪೈಜಾಮದಲ್ಲಿ ನಿಜಕ್ಕೂ ವಿಚಿತ್ರವಾಗಿ ಕಾಣಿಸುತ್ತಿದ್ದ. ಫ್ಲಾಸ್ಕಿನಿಂದ ಒಂದು ಬಟ್ಟಲಿಗೆ ಬಿಸಿ ಕಾಫಿ ಹಾಕಿಕೊಂಡು ಕುಡಿಯತೊಡಗಿದ. ರಾವು ಅವರ ಪೆಟ್ಟಿಗೆಯಲ್ಲಿ ಓವಲ್ಟೀನ್ ಇದ್ದ ಫ್ಲಾಸ್ಕ್ ಇತ್ತು. ಅದನ್ನು ತೆಗೆದು ಆಪ್ಯಾಯತೆಯಿಂದ ಓವಲ್ಟೀನ್ ಅನ್ನು ಚಪ್ಪರಿಸತೊಡಗಿದರು. ಅವರಿಗೆ ಓವಲ್ಟೀನ್ ಅಂದರೆ ಬಹಳ ಇಷ್ಟ. ಆದರೆ ಆ ಇಷ್ಟಕ್ಕೆ ಹದ್ದುಮೀರಿ ಅವರೆಂದೂ ವಶವಾದವರಲ್ಲ. ಆ ಮಧುರ ಪಾನೀಯವನ್ನು ಅವರು ದಿನಕ್ಕೆ ಎರಡು ಸಲ ಒಂದೊಂದು ಬಟ್ಟಲು ಕುಡಿಯುತ್ತಿದ್ದರು.

ಗಾಳಿ ಮೇಲಿಂದ ಮೇಲೆ ಭಯಂಕರವಾಗಿ ಬೀಸುತ್ತಿತ್ತು. ದಪ್ಪ ಹನಿಗಳು ರೈಲು ಬೋಗಿಯ ಮೇಲೆ ಅಪ್ಪಳಿಸುತ್ತಿದ್ದವು. ಆ ಅಬ್ಬರಕ್ಕೆ ರೈಲು ಓಡುವ ಶಬ್ದವೂ ಮರೆಗೆ ಬಿದ್ದಿತ್ತು.

ರೈಲು ಸಾಗುತ್ತಿರುವಂತೆ ಅದರ ಕುಲುಕಾಟ ಬಿಟ್ಟರೆ ರಾವು ಅವರಿಗೆ ಬೇರೇನೂ ತಿಳಿಯುತ್ತಿರಲಿಲ್ಲ.

'ತೂಫಾನಿನಂತಿದೆ' ಯುವಕ ಹೆಂಡತಿಗೆ ಹೇಳಿದ. ಅವಳು ಏನೂ ಹೇಳದೆ ರಗ್ಗು ಹೊದ್ದುಕೊಂಡಳು. ಅವಳ ಮುಖದಲ್ಲಿ ಏನೋ ದೊಡ್ಡ ಚಿಂತೆ ಪ್ರತಿಫಲಿಸುತ್ತಿತ್ತು. ಚಂಡಮಾರುತದ ಬಗ್ಗೆ ರಾವು ಅವರ ಮನಸ್ಸಿನಲ್ಲಿ ನಡುಕ ಪ್ರಾರಂಭವಾಯಿತು.

ಬೋಗಿಯ ಬಾಗಿಲು ತೆರೆದುಕೊಂಡಿತು. ಒಮ್ಮೆಲೆ ಜೋರಾಗಿ ಗಾಳಿಮಳೆ ಬೋಗಿಯೊಳಗೆ ನುಗ್ಗಿ ಬಂದಿತು. ಹರಿದ, ಒದ್ದೆಯಾದ ಬಟ್ಟೆಯೊಂದಿಗೆ ಹೆಂಗಸೊಬ್ಬಳು ಬೋಗಿಯೊಳಗೆ ಬಂದಳು. ಒಳಗಿದ್ದವರು ಹೇಳುವ ಅಭ್ಯಂತರಗಳನ್ನು ಲೆಕ್ಕಿಸದೆ ಬಾಗಿಲು ಹಾಕಿ, ಒಂದು ಮೂಲೆಯಲ್ಲಿ ನೀರು ಸುರಿಸುತ್ತಾ ನಿಂತಳು. ವೃದ್ಧ ಸಾಕಷ್ಟು ಕೋಪ ತಂದುಕೊಂಡು, 'ಇದು ಮರ್ಯಾದೆಯ ಬೋಗಿಯೆಂದು ತಿಳಿಯದೆ?' ಅಂದ.

'ಸ್ವಾಮಿ ಸ್ವಾಮೀ, ತಾತನವರೇ, ತಿರುಪೆಮುಂಡೆಗೆ ನಿಲ್ಲಲು ಕೊಂಚ ಜಾಗ ಕೊಡುವುದಿಲ್ಲವೇ ಸ್ವಾಮಿ? ದಯೆಯುಳ್ಳ ಸ್ವಾಮಿಗಳು, ಮಕ್ಕಳಿರುವ ಅಪ್ಪಂದಿರು, ತಿರುಪೆ ಮುಂಡೆಗೆ ಏನಾದರೂ ಎಸೆಯಿರಿ ಸ್ವಾಮಿ. ಹಸಿದ ಹೊಟ್ಟೆಯಲ್ಲಿ ಉರಿ ಎದ್ದಿದೆ ಸ್ವಾಮಿಗಳೇ. ಎಲ್ಲರೂ ದೊಡ್ಡ ದೊಡ್ಡ ಸ್ವಾಮಿಗಳು, ದೊಡ್ಡ ದೊರೆಗಳು. ಬಡಮುಂಡೆಯನ್ನು ಹೀಗೆ ಹಸಿವೆಯಿಂದ ಸಾಯಲು ಬಿಡರು ಸ್ವಾಮಿಗಳು...'

ರಾವು ಅವರು ಅವಳತ್ತ ನೋಡಿದರು. ಅವಳ